# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/2572/2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 24-01-2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ರಾಜು, ಎಫ್.ಡಿ.ಎ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹುಮನಾಬಾದ, ಬೀದರ ಜಿಲ್ಲೆ,** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೋಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಬೀದರ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ರಾಜು, ಎಫ್.ಡಿ.ಎ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹುಮನಾಬಾದ, ಬೀದರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀಮತಿ ದೀಪ ಡಿ, ಕೋಂ ಶ್ರೀ ಕಲ್ಯಾಣರಮಣ, ನಂ: 151/ಎಎಮ್‌ಎಲ್ ಬ್ಲಾಕ್, ಉರ್ಗಮ್ ಪೋಸ್ಟ್, ಕೆ.ಜಿ.ಎಫ್, ಸದ್ಯ ವಾಸ ಟೀಚರ್ಸ್ ಕಾಲೋನಿ, ಹುಮನಾಬಾದ, ಜಿ: ಬೀದರ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :-**

i). ದೂರುದಾರರು ತಮ್ಮ ದೂರಿನಲ್ಲಿ, ತಾನು ಉನ್ನತ ವ್ಯಾಸಂಗಕ್ಕಾಗಿ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ನಿಯಮಗಳನ್ವಯ ಅಕ್ಟೋಬರ್ 2016 ರಿಂದ ಅಕ್ಟೋಬರ್ 2018 ರವರೆಗೆ ಕಿದ್ವಾಯಿ ಕಾಲೇಜಿನಲ್ಲಿ ಪೋಸ್ಟ್ ಬಿ.ಬಿ.ಎಸ್.ಸಿ ನರ್ಸಿಂಗ್ ವಿಧ್ಯಾಭ್ಯಾಸ ಮಾಡಿದ್ದು, ಸದರಿ ಅವಧಿಯಲ್ಲಿ ಪ್ರತಿ ತಿಂಗಳ ವೇತನವನ್ನು ಸಹ ಪಡೆದಿರುತ್ತಾರೆ. ದೂರುದಾರರು ಬಿ.ಬಿ.ಎಸ್.ಸಿ ನರ್ಸಿಂಗ್ ವ್ಯಾಸಂಗ ಮುಗಿಸಿಕೊಂಡು, ನವೆಂಬರ್ 2018 ರಲ್ಲಿ ಮರಳಿ ಸಾರ್ವಜನಿಕ ಆಸ್ಪತ್ರೆ, ಹುಮನಾಬಾದ, ಇಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಸದರಿ ಎರಡು ವರ್ಷದ ಶಿಷ್ಯ ವೇತನ

(ಸ್ಟೈಫಂಡ್) ಅರಿಯರ್ಸ್ ಬಿಲ್ ಮಂಜೂರಾತಿ ಕೋರಿ ಆಸ್ಪತ್ರೆಯ ಮುಖ್ಯಸ್ಥರಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ಶಿಷ್ಯ ವೇತನ ಬಿಲ್ 60,201/- ರೂ.ಗಳಾಗಿದ್ದು, ಅದನ್ನು ಸಿದ್ದಪಡಿಸಿ ಮೇಲಾಧಿಕಾರಿಗೆ ಸಲ್ಲಿಸಲು ಎದುರುದಾರರನ್ನು ಭೇಟಿಯಾಗಿರುತ್ತಾರೆ. ದಿನಾಂಕ: 24/06/2019ರ 5-6 ದಿವಸಗಳ ಹಿಂದೆ ಎದುರುದಾರರನ್ನು ದೂರುದಾರರು ಭೇಟಿ ಮಾಡಿ, ತನ್ನ ಕೆಲಸದ ಬಗ್ಗೆ ವಿಚಾರಿಸಿದಾಗ, ಅವರು 6,000/- ರೂ. ಲಂಚದ ಹಣಕ್ಕೆ ಬೇಡಿಕ್ಕೆ ಇಟ್ಟಿರುತ್ತಾರೆ. ದೂರುದಾರರು ಸ್ವಲ್ಪ ಕಡಿಮೆ ಮಾಡಿ ಎಂದಾಗ, ಅದರಲ್ಲಿ ಏನು ಕಡಿಮೆ ಆಗುತ್ತೆ, ನಾವು 03 ಜನ 2000/- ರೂ.ಗಳಂತೆ ತೆಗೆದುಕೊಳ್ಳುತ್ತೇವೆಂದು ತಿಳಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ದೂರುದಾರರು ದಿನಾಂಕ: 24-06-2019 ರಂದು ಪೋಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಬೀದರ್, ಇಲ್ಲಿಗೆ ದೂರು ನೀಡಿದ್ದು, ಸದರಿ ದೂರು ಮೊ.ಸಂಖ್ಯೆ: 05/2019 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7(a)ರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ii). ದಿನಾಂಕ: 24-06-2019ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ನಾಗರಾಜು ಪಂಚ-1, ಅರ್ಷದ್ ಅಹ್ಮದ್ ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 6000/- (ಹಣದ ಡಿನಾಮಿನೇಷನ್ 2000 x 3) ಗಳನ್ನು ಹಾಗೂ ಲಂಚದ ಹಣಕ್ಕೆ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಸಹ ಹಾಜರುಪಡಿಸಿರುತ್ತಾರೆ. ಪಂಚರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ನೋಟಿನ ವಿವರವನ್ನು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಶ್ರೀ ನಾಗರಾಜು ಪಂಚ-1, ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ 6,000/- ರೂ.ಗಳ ಹಣವನ್ನು ಎಣಿಸಿ ದೂರುದಾರರ ಪರ್ಸ್‌ನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಮುಖವನ್ನು ಕರವಸ್ತ್ರದಿಂದ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ನೆರಳು ಸಾಕ್ಷಿ ಪಂಚ-2 ಅರ್ಷದ್ ಅಹ್ಮದ್ ಇವರು ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ದಿನಾಂಕ: 24-06-2019 ರಂದು ಬೆಳಿಗ್ಗೆ 12.45 ರಿಂದ ಮ: 13.45 ರವರೆಗೆ ಮಾಡಿರುತ್ತಾರೆ.

iii). ಅದೇ ದಿನ ಅಂದರೆ, ದಿನಾಂಕ: 24-06-2019 ರಂದು ದೂರುದಾರರು, ಹಾಗೂ ಪಂಚ-2 ರವರ ಜೊತೆ ತನಿಖಾಧಿಕಾರಿಯವರು ಸಿಬ್ಬಂದಿಯವರ ಜೊತೆ ಇವರುಗಳು ಎದುರುದಾರರ ಕಾರ್ಯನಿರ್ವಹಿಸುವ ಸಾರ್ವಜನಿಕ ಆಸ್ಪತ್ರೆ ಹತ್ತಿರ ಬಂದಿರುತ್ತಾರೆ. ದೂರುದಾರರು ನೆರಳು ಸಾಕ್ಷಿ ಯೊಂದಿಗೆ ಎದುರುದಾರರನ್ನು ಭೇಟಿ ಮಾಡಿ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರು ದೂರುದಾರರಿಗೆ "ಈ ಹಿಂದೆ ತಿಳಿಸಿದಂತೆ ಹಣ ತಂದಿರುವೀಯಾ ಎಂದು ಕೇಳಲಾಗಿ, ದೂರುದಾರರು ಹೌದು ಸಾರ್ ತಂದಿರುತ್ತೇನೆಂದು ಹೇಳಿ, ತನ್ನ ಬಳಿ ಇದ್ದ ಫಿನಾಪ್ತಿಲಿನ್ ಪೌಡರ್ ಲಂಚದ ಹಣವನ್ನು ಎದುರುದಾರರಿಗೆ ಕೊಟ್ಟಿರುತ್ತಾರೆ. ಸದರಿ ಹಣವನ್ನು ಎದುರುದಾರರು ತನ್ನ ಬಲಗೈಯಿಂದ ಪಡೆದು ಎರಡೂ ಕೈಗಳಿಂದ ಎಣಿಸಿ ತನ್ನ ಭಾಗವಾದ 2000/- ರೂ.ಗಳನ್ನು ತೆಗೆದುಕೊಂಡು ಉಳಿದ 4000/- ರೂ.ಗಳನ್ನು ಲಂಚದ ಹಣವನ್ನು ಸಂಬಂಧಪಟ್ಟ ಎ.ಎ.ಓ ಮತ್ತು ಮುಖ್ಯ ವೈದ್ಯಾಕಾರಿಗಳಿಗೆ ನೀವೇ ನೀಡಿ ಎಂದು ದೂರುದಾರರಿಗೆ ವಾಪಸ್ಸು ಕೊಟ್ಟಿರುತ್ತಾರೆ. ಎದುರುದಾರರು ಪಡೆದ ಲಂಚದ ಹಣವನ್ನು ತನ್ನ ಕುರ್ಚಿಯ ಬಲಭಾಗದಲ್ಲಿದ್ದ ಅಲಮೇರದಲ್ಲಿದ್ದ (Acquitance Register Number-01) ನೇದ್ದರ ಪುಸ್ತಕದಲ್ಲಿನ ಮಧ್ಯಭಾಗದಲ್ಲಿ ಇಟ್ಟಿರುತ್ತಾರೆ. ನಂತರ ದೂರುದಾರರು ಎ.ಎ.ಓ ರವರನ್ನು ಭೇಟಿ ಮಾಡಿ, ಚರ್ಚಿಸಿದಾಗ ಅವರು ಲಂಚದ ಹಣ ಬೇಡವೆಂದು ತಿಳಿಸಿರುತ್ತಾರೆ. ನಂತರ ದೂರುದಾರರು ಮುಖ್ಯ ವೈದ್ಯಾಧಿಕಾರಿಯ ಕೊಠಡಿಗೆ ಹೋಗಿ ನೋಡಲಾಗಿ, ಅಲ್ಲಿ ಮುಖ್ಯ ವೈದ್ಯಾಧಿಕಾರಿಗಳು ಇರಲಿಲ್ಲ. ನಂತರ ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರ ನಿಗದಿತ ಸೂಚನೆಯನ್ನು ಪಡೆದು, ಸ್ಥಳಕ್ಕೆ ಬಂದಾಗ, ದೂರುದಾರರು, ಎದುರುದಾರರನ್ನು ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು, ಎದುರುದಾರರ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆ ಮೇರೆಗೆ ಸಿಬ್ಬಂದಿ ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ಪ್ರತ್ಯೇಕವಾಗಿ ತೊಳೆಸಿದಾಗ, ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ ಹಾಗೂ ತನಿಖಾಧಿಕಾರಿ ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದಾಗ, ಎದುರುದಾರರು (Acquitance Register Number-01) ನೇದ್ದರ ಪುಸ್ತಕದಲ್ಲಿನ ಮಧ್ಯಭಾಗದಲ್ಲಿ ಇದ್ದ ಹಣವನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿ ಸೂಚನೆ ಮೇರೆಗೆ, ಸದರಿ ಹಣವನ್ನು ಪಂಚರು ಪರಿಶೀಲಿಸಿ ಹಣದ ಮೌಲ್ಯ ಮತ್ತು ನಂಬರುಗಳನ್ನು ತಾಳೆ ಮಾಡಿಕೊಂಡಿರುತ್ತಾರೆ. ನಂತರ ಸದರಿ ಹಣವನ್ನು ತನಿಖಾಧಿಕಾರಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ ಸಿಬ್ಬಂದಿ ಒಣ ಹತ್ತಿಯಿಂದ ಲಂಚದ ಹಣ ಇಟ್ಟಿದ್ದ ಪುಸ್ತಕದ ಮದ್ಯ ಭಾಗದ ಹಾಳೆಯನ್ನು ಹೊರೆಸಿ, ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಯವರು ಮುಖ್ಯ ವೈದ್ಯಾಧಿಕಾರಿ ಶ್ರೀ ಅವಿನಾಶ ಏಖ್ಯೇಳ್ಳಿಕರ್ ರವರನ್ನು ಭೇಟಿ ಮಾಡಿ ಪ್ರಕರಣದ ಬಗ್ಗೆ ತಿಳಿಸಿದಾಗ, ಅವರು ದೂರುದಾರರ ಕಡತಕ್ಕೆ ತಾನು ದಿನಾಂಕ: 02-05-2019ರಂದು ಸಹಿ ಮಾಡಿ ಮಂಜೂರು ಮಾಡಿರುತ್ತೇನೆ ಎಂದು ಹೇಳಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರು ದೂರುದಾರರಿಂದ ಲಂಚದ ಹಣ ಪಡೆದ ಬಗ್ಗೆ, ಸಮಜಾಯಿಷಿಕೆ ಕೇಳಲಾಗಿ ಎದುರುದಾರರು "ಶ್ರೀಮತಿ ದೀಪಾ ಡಿ. ರವರು ತಮ್ಮ ಬಿಎಸ್‌ಸಿ ನರ್ಸಿಂಗ್ ವ್ಯಾಸಂಗದ ಡಿಎ ಬಿಲ್ ಮಂಜೂರಿಸಲು ಅವರಾಗಿಯೇ 2000/– ರೂ.ಗಳನ್ನು ತಂದು ಇಂದು ದಿನಾಂಕ: 24–06–2019 ರಂದು ನನ್ನ ಟೇಬಲ್ ಮೇಲೆ ಇದ್ದ ಪೈಲಿನ ಒಳಗಡೆ ಇಟ್ಟು ಹೋಗಿರುತ್ತಾರೆ. ನಾನು ಕೂಡಲೇ ಅವರಿಗೆ ಈ ಹಣವನ್ನು ತೆಗೆದುಕೊಂಡು ಹೋಗಿರಿ ಎಂದು ಹೇಳಿದರೂ ತೆಗೆದುಕೊಂಡು ಹೋಗಿರುವುದಿಲ್ಲ ಇತ್ಯಾದಿ ಬರೆದಿರುತ್ತಾರೆ". ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರಾದ ನಿಮ್ಮನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ದಿ: 24/6/2019 ರಂದು ಟ್ರಾಪ್ ಪಂಚನಾಮೆಯನ್ನು 15.30 ಗಂಟೆಯಿಂದ 17.30 ಗಂಟೆಯವರೆಗೆ ಬರೆದಿರುತ್ತಾರೆ.

iv). ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವ ಬಗ್ಗೆ ವರದಿ ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇಲ್ಲಿಗೆ ಕಳುಹಿಸಿರುತ್ತಾರೆ.

v). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ನಿಮ್ಮಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

vi). ಎದುರುದಾರರಿಗೆ ದಿ: 29/9/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 21/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ದೂರುದಾರರಿಗೆ ಡಿ.ಎ.ಬಿಲ್ ಅರಿಯಾರ್ಸ್ ಬಾಕಿ ಇರುವುದನ್ನು ಒಪ್ಪಿಕೊಂಡಿರುತ್ತಾರೆ ಹಾಗೂ ದೂರುದಾರರು, ಡಾ: ಅವಿನಾಶ ಎಖ್ಖೆಳ್ಳಿಕರ್, ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ, ಹಮನಾಬಾದ್, ಇವರಿಗೆ ಮನವಿ ಪತ್ರ ಸಲ್ಲಿಸಿದ ನಂತರ, ಎದುರುದಾರರು ಒಂದು ವಾರದಲ್ಲಿ ಬಿಲ್‌ನ್ನು ತಯಾರಿಸಿ, ಮುಖ್ಯ ವೈದ್ಯಾಧಿಕಾರಿಗಳು ಸಹಿಗಾಗಿ ಇಟ್ಟಿರುತ್ತೇನೆಂದು ಹೇಳಿರುತ್ತಾರೆ. ಸದರಿ ಮುಖ್ಯ ವೈದ್ಯಾಧಿಕಾರಿಗಳು ಎದುರುದಾರರಿಗೆ ಬಿಲ್ಲನ್ನು ಶಿವರಾಜ್ ಪಾಟೀಲ, ಸಹಾಯಕ ಆಡಳಿತಾಧಿಕಾರಿ ರವರಿಂದ ಪರಿಶೀಲಿಸಿ ಸಲ್ಲಿಸಲು ಹೇಳಿದ ಮೇರೆಗೆ, ಅದರಂತೆ, ಎದುರುದಾರರು ಪರಿಶೀಲನೆಗಾಗಿ ಹಾಗೂ ಸಹಿಗಾಗಿ ಇಟ್ಟಿರುತ್ತೇನೆಂದು ಹೇಳಿರುತ್ತಾರೆ. ತದನಂತರ, ಸಹಾಯಕ ಆಡಳಿತಾಧಿಕಾರಿಯವರು ಸದರಿ ಬಿಲ್‌ಗೆ ಸಹಿ ಮಾಡಲು ದೂರುದಾರರಿಂದ, ಹಣ ಕೇಳುವಂತೆ ಎದುರುದಾರರಿಗೆ ತಿಳಿಸಿರುತ್ತಾರೆಂದು ಹೇಳಿರುತ್ತಾರೆ. ಸದರಿ ವಿಚಾರವನ್ನು ಎದುರುದಾರರು ದೂರುದಾರರಿಗೆ ತಿಳಿಸಿರುತ್ತಾರೆ. ಆದರೆ, ಎದುರುದಾರರು ದೂರುದಾರರ ಬಿಲ್ಲಿಗೆ ಸಹಿ ಮಾಡುವಂತೆ ಸಹಾಯಕ ಆಡಳಿತಾಧಿಕಾರಿ ಮತ್ತು ಮುಖ್ಯ ವೈದ್ಯಾಧಿಕಾರಿ ಇವರ ಮುಂದೆ ಸಹಿಗಾಗಿ ತೆಗೆದುಕೊಂಡು ಹೋದಾಗ, ಸದರಿ ಅಧಿಕಾರಿ

ದೂರುದಾರರ ಹತ್ತಿರ ಎದುರುದಾರರು ಹಣ ಪಡೆದ ಮೇಲೆ ತಾನು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ. ತದನಂತರ, ದೂರುದಾರರು ಎದುರುದಾರರಿಗೆ ಮೊಬೈಲ್ ಕರೆ ಮಾಡಿ, ಬಿಲ್ಲಿನ ಬಗ್ಗೆ ವಿಚಾರಿಸಿದಾಗ, ಎದುರುದಾರರು ತನ್ನ ಕೆಲಸವನ್ನು ಮಾಡಿರುತ್ತೇನೆ ನೀವೆ ಸಹಾಯಕ ಆಡಳಿತಾಧಿಕಾರಿ ಮತ್ತು ಮುಖ್ಯ ವೈದ್ಯಾಧಿಕಾರಿಯವರನ್ನು ಭೇಟಿ ಮಾಡಿ, ಅವರು 6000/- ರೂ. ಕೇಳುತ್ತಾರೆ. ನೀವೆ ಅವರ ಹತ್ತಿರ ಬಗೆಹರಿಸಿಕೊಳ್ಳಿ ಎಂದು ಹೇಳಿರುತ್ತಾರೆ. ದಿ: 24/6/2019 ರಂದು ಡಾ: ಅವಿನಾಶ ಎಖೇಳಿಕರ್, ಮುಖ್ಯ ವೈದ್ಯಾಧಿಕಾರಿಗಳು, ಆಸ್ಪತ್ರೆಗೆ ಬೇಗನೆ ಬಂದು, ಸಚ್ಚಿನಾದತ್ತಿ ನೌಕರನಿಂದ ಎದುರುದಾರರ ಅಲ್‌ಮೆರಾ ಕೀ ತೆಗೆಸಿ, ಬಿಲ್ಲಿನ ಮೇಲೆ ರುಜು ಮಾಡಿ, ಮತ್ತೆ ಅಲ್‌ಮೆರಾದಲ್ಲಿ ಇಟ್ಟಿರುತ್ತಾರೆ. ಅದನ್ನು ತಾನು ನೋಡಿರುವುದಿಲ್ಲ ಎಂದು ಹೇಳಿರುತ್ತಾರೆ. ಅದೇ ದಿನ ದೂರುದಾರರು ನನ್ನ ಹತ್ತಿರ ಬಂದು, 2000/- ರೂ.ಗಳನ್ನು ಅಕೌಂಟೆನ್ಸ್ ರಿಜಿಸ್ಟರ್ ನಲ್ಲಿ ಇಟ್ಟು ಹೋಗಿರುತ್ತಾರೆ. ಆ ಹಣಕ್ಕೆ ನನಗೆ ಸಂಬಂಧವಿಲ್ಲ. ಪೊಲೀಸರು ಎದುರುರಿಸಿ ನನ್ನಿಂದ 2000/- ರೂ. ನೋಟುನ್ನು ತೆಗೆದಿಸಿರುತ್ತಾರೆ. ಆಮೇಲೆ ಪ್ರಕರಣವನ್ನು ದಾಖಲಿಸಿರುತ್ತಾರೆ. ದೂರುದಾರರು ಎ.ಸಿ.ಬಿ. ಹತ್ತಿರ ಹೋಗಿರುವ ವಿಷಯ ತಿಳಿದು, ಮುಖ್ಯ ವೈದ್ಯಾಧಿಕಾರಿಗಳು ನನಗೆ ಗೊತ್ತಾಗದ ಹಾಗೆ ಬಿಲ್ಲಿಗೆ ಸಹಿ ಇಟ್ಟಿರುತ್ತಾರೆ. ಇದರಲ್ಲಿ ಬಿಲ್ಲು ತಯಾರಿಸುವುದು ಮಾತ್ರ ನನ್ನ ಕೆಲಸ ಸಹಾಯಕ ಆಡಳಿತಾಧಿಕಾರಿಯಾದ ಶ್ರೀ ಶಿವರಾಜಪಾಟೀಲ ಮತ್ತು ಮುಖ್ಯ ವೈದ್ಯಾಧಿಕಾರಿಗಳಾದ ಡಾ: ಶ್ರೀ ಅವಿನಾಶ ಎಖ್ವೆಳ್ಳಿಕರ್, ಇವರ ತಪ್ಪಿನಿಂದ ಎದುರುದಾರರು ಬಲಿಪಶುವಾಗಿರುತ್ತಾರೆಂದು ಹೇಳಿರುತ್ತಾರೆ. ಹಾಗಾಗಿ ಎದುರುದಾರರ ತನ್ನನ್ನು ವಿಚಾರಣೆಯಿಂದ ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

3. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

4. 21. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು–1
ಕರ್ನಾಟಕ ರಾಜ್ಯ, ಬೆಂಗಳೂರು